### ಸ್ಪೀಕರ್ ರಮೇಶ್ ಕುಮಾರ್ ಕಾದು ಕುಳಿತಿದ್ದರೂ ಬಾರದ ಶಾಸಕರು

# ವಿಚಾರಣೆಗೆ 3 ಶಾಸಕರು ಗೈರು

## ಶಾಸಕರಾದ ಆನಂದಸಿಂಗ್, ಪ್ರತಾಪ್ ಗೌಡ, ನಾರಾಯಣಗೌಡ ಗೈರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು 13/7/19







ಅತೃಪ್ತ ಶಾಸಕರ ಅನರ್ಹತೆ ಹಾಗೂ ರಾಜೀನಾಮೆಗೆ ಸಂಬಂಧಿಸಿದಂತೆ ಮಂಗಳವಾರದ ವರೆಗೂ ಯಥಾಸ್ಥಿತಿ ಕಾಪಾಡಿಕೊಳ್ಳುವ ಸುಪ್ರೀಂ ಕೋರ್ಟ್ ಆದೇಶದ ನಡುವೆ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಅವರು ತಾವು ಸಮಯ ನೀಡಿದ್ದಂತೆ ಮೂವರು ಅತೃಪ್ತ ಶಾಸಕರ ವಿಚಾರಣೆಗಾಗಿ ಕಾದು ಕುಳಿತ ಘಟನೆ ಶುಕ್ರವಾರ ನಡೆಯಿತು.

ರಾಜೀನಾಮೆ ಸಲ್ಲಿಸಿದ್ದ ಐವರು ಅತೃಪ್ತ ಶಾಸಕರ ಪೈಕಿ ಆನಂದಸಿಂಗ್, ಪ್ರತಾಪ್‌ಗೌಡ ಪಾಟೀಲ್ ಮತ್ತು ನಾರಾಯಣ ಗೌಡ ಅವರಿಗೆ ವಿಚಾರಣೆಗೆ ಹಾಜರಾಗಲು ಶುಕ್ರವಾರ ಮಧ್ಯಾಹ್ನ 3ಕ್ಕೆ ಸಮಯಾವಕಾಶ ವನ್ನು ಸ್ಪೀಕರ್ ನೀಡಿದ್ದರು. ಅದರಂತೆ ಶಾಸಕರ ನಿರೀಕ್ಷೆಯಲ್ಲಿ ಸ್ಪೀಕರ್ ರಮೇಶ್ ಕುಮಾರ್ ಮಧ್ಯಾಹ್ನ 4 ಗಂಟೆವರೆಗೆ ಕಚೇರಿಯಲ್ಲಿಯೇ ಕಾದು ಕುಳಿತರು. ಆದರೆ, ನಿಗದಿತ ಸಮಯ ಮುಕ್ತಾಯವಾದರೂ ಶಾಸಕರಾದ ಆನಂದ್‌ಸಿಂಗ್, ಪ್ರತಾಪ್‌ಗೌಡ ಮತ್ತು ನಾರಾಯಣಗೌಡ ಆಗಮಿಸಲಿಲ್ಲ. ಹೀಗಾಗಿ ಸ್ಪೀಕರ್ ಕಚೇರಿ ತೆರಳಿದರು. ಸುಪ್ರೀಂ ಯಥಾಸ್ಥಿತಿ ಕಾಪಾಡಿಕೊಳ್ಳುವ ಆದೇಶ ನೀಡಿದ್ದರೂ ಸ್ಪೀಕರ್ ವಿಚಾರಣೆ ಮುಂದೂಡದೇ ಶಾಸಕರ ಆಗಮನಕ್ಕಾಗಿ ಕಾದು ಕುಳಿತದ್ದು ವಿಶೇಷವಾಗಿತ್ತು.

## ಕಲಾಪಕ್ಕೆ ಅತೃಪ್ತರು ಗೈರು

**ವಿಧಾನಸಭೆ:** ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ಮಿತ್ರಪಕ್ಷಗಳ ಅತೃಪ್ತ ಶಾಸಕರು ನಿರೀಕ್ಷೆಯಂತೆ ಸದನಕ್ಕೆ ಗೈರಾಗಿದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ ವದಂತಿ ಇದ್ದ ಶಾಸಕರು ಹಾಜರಾಗುವ ಮೂಲಕ ಸರ್ಕಾರದ ಬೆಂಬಲಕ್ಕಿದ್ದೇವೆ ಎಂಬ ಸಂದೇಶವನ್ನು ರವಾನಿಸಿದರು. ರಮೇಶ್ ಜಾರಕಿಹೊಳಿ, ಭೈರತಿ ಬಸವರಾಜ್, ಎಸ್.ಟಿ. ಸೋಮಶೇಖರ್, ಮುನಿರತ್ನ, ಮಹೇಶ್ ಕುಮಟಳ್ಳಿ, ಬಿ.ಸಿ.ಪಾಟೀಲ್, ಶಿವರಾಮ್ ಹೆಬ್ಬಾರ್, ವಿಶ್ವನಾಥ್, ನಾರಾಯಣಗೌಡ, ಗೋಪಾಲಯ್ಯ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಪಕ್ಷೇತರರಾದ ನಾಗೇಶ್, ಆರ್. ಶಂಕರ್, ಬೆಂಗಳೂರಲ್ಲಿನಲ್ಲೇ ಇದ್ದ ರಾಮಲಿಂಗಾರೆಡ್ಡಿ, ರೋಷನ್ ಬೇಗ್, ಶಾಸಕ ಡಾ.ಕೆ.ಸುಧಾಕರ್, ಸಚಿವ ಎಂ.ಟಿ.ನಾಗರಾಜ್ ಸದನಕ್ಕೆ ಗೈರಾಗಿದ್ದರು. ವಿಪ್ ಜಾರಿ ಮಾಡಿದರೂ ಸೊಪ್ಪು ಹಾಕಲಿಲ್ಲ.

**ಪಟ್ಟಿಯಲ್ಲಿದ್ದವರು ಹಾಜರ್:** ಮತ್ತಷ್ಟು ಅಸಮಾಧಾನಿತ ಶಾಸಕರು ಸದನಕ್ಕೆ ಗೈರಾಗುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ, ಅದನ್ನು ಹುಸಿಗೊಳಿಸಿ ಸದನಕ್ಕೆ ಹಾಜರಾಗಿದ್ದರು. ಕಾಂಗ್ರೆಸ್‌ನ ಹಿರಿಯನಾಯಕ ರಾಮಲಿಂಗಾರೆಡ್ಡಿ ಪುತ್ರಿ ಹಾಗೂ ಶಾಸಕಿ ಸೌಮ್ಯ ರೆಡ್ಡಿ, ಶಾಸಕಿ ಅಂಜಲಿ ನಿಂಬಾಳ್ಕರ್, ಶಾಸಕರಾದ ಗಣೇಶ್ ಹುಕ್ಕೇರಿ, ಮಹಾಂತೇಶ್ ಕೌಜಲಗಿ ಸದನಕ್ಕೆ ಹಾಜರಾಗಿದ್ದರು. ಈ ಶಾಸಕರು ರಾಜೀನಾಮೆ ನೀಡಿ ಅತೃಪ್ತರ ಪಟ್ಟಿ ಸೇರುತ್ತಾರೆ ಎಂದು ಹೇಳಲಾಗಿತ್ತು.